ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

# ಬಲ್ಲ ಗ್ರಾಮ ಪಂಚಾಯ್ತಿ ಕಾರ್ಯಾಲಯ

ಬಲ್ಲ :-: ಮುಳಬಾಗಿಲು ತಾಲ್ಲೂಕು :-: ಕೋಲಾರ ಜಿಲ್ಲೆ.

ಬಲ್ಲ ಗ್ರಾಮ ಪಂಚಾಯಿತಿ ಕಛೇರಿ ಸಂಖ್ಯೆ ದಿನಾಂಕ ಬಲ್ಲ ಮುಳಬಾಗಿಲು ತಾ||

ಗೆ,

ಶ್ರೀ ಗೌರವಾನ್ವಿತ ಮುಖ್ಯ ಮಂತ್ರಿಗಳು,
ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪ ರವರು,
ಕರ್ನಾಟಕ ಸರ್ಕಾರ, ವಿಧಾನ ಸೌಧ ಬೆಂಗಳೂರು,

ದಿನಾಂಕ..1..1..5..2020

ಮಾನ್ಯರೇ,

ವಿಷಯ:- ಆಡಳಿತ ಅಧಿಕಾರಿಗಳು ಅಥವಾ ಗ್ರಾಮ ಪಂಚಾಯಿತಿಗಳಿಗೆ ಆಡಳತ ಸಮಿತಿಯ ನೇಮಕದ ಬದಲಿಗೆ ಹಾಲಿ ಇರುವ ಚುನಾಯಿತ ಪ್ರತಿನಿಧಿಗಳನ್ನೇ ಚುನಾವಣೆ ನಡೆಯುವವರಿಗೆ ಮುಂದುವರಿಸುವ ಬಗ್ಗೆ. ಒತ್ತಾಯಿಸಿ ಪತ್ರ

*** *** ***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈಡೀ ದೇಶದ್ಯಾಂತ ವ್ಯಾಪಕವಾಗಿ ಹರಡುತ್ತಿರುವ ಕೋವಿಡ್/19 ರ ಪರಿಣಾಮ ಕರ್ನಾಟಕದ ಮೇಲೂ ಆಗಿರುವುದರಿಂದ ರಾಜ್ಯದಲ್ಲಿನ ಆಡಳಿತ ವ್ಯಸ್ಥೆಯಲ್ಲಿ ವಿವಿಧ ರೀತಿಯ ಬದಲಾವಣೆಗಳಾಗಿದೆ. ಇದರ ಪರಿಣಾಮ ಕರ್ನಾಟಕದಲ್ಲಿ ಇದೇ ಮೇ ತಿಂಗಳ ಅತ್ಯಂತದೊಳಗೆ ನಡೆಯಬೇಕಿದ್ದ, ಗ್ರಾಮ ಪಂಚಾಯಿತಿ ಚುನಾವಣೆಯ ಮೇಲು ಉಂಟಾಗಿದೆ. ಈ ಕೋವಿಡ್ -19 ಸಂಕಷ್ಟದ ಸಮಯದಲ್ಲಿ ಚುನಾವಣೆಯಂತಹ ಕಾರ್ಯವನ್ನು ಕೈಗೆ ಎತ್ತಿಕೊಳ್ಳುವುದು ಅಸಾಧ್ಯವೇ ಸರಿ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈಗಾಗಲೇ ಹೇಳಿರುವಂತೆ ಸುಮಾರು 6 ತಿಂಗಳ ಕಾಲ ಚುನಾವಣೆ ಮುಂದೂಡ ಬೇಕಾಗಿರುವುದು ಕಾನೂನಿನಲ್ಲಿ ಅವಕಾಶವಿದ್ದರೂ ಈ ವಿಕೋಪದ ಪರಿಸ್ಥಿತಿ ಇರುವಾಗ ಸೂಕ್ತವಾದುದಲ್ಲ.

ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸರ್ಕಾರದ ರಥದ ಎರಡುಗಾಲಿಗಳಂತೆ ರಥ ಮುನ್ನೆಡುಸುವಲ್ಲಿ ಇಬ್ಬರ ಪಾತ್ರವು ಬಹಳ ಪ್ರಮುಖವಾದುದು ಗ್ರಾಮ ಪಂಚಾಯಿತಿ ಒಂದು ಸ್ಥಳೀಯ ಸ್ವಯಂ ಸರ್ಕಾರ ಹೀಗಾಗಿ ಇಡೀ ರಾಜ್ಯದಾದಂತ್ಯ ಕೋವಿಡ್-19 ಪರಿಸ್ಥಿತಿ ಘೋಷಣೆಯಾದಾಗ ಮೊಟ್ಟ ಮೊದಲು ಸರ್ಕಾರ ಮಾಡಿದ ಕೆಲಸವೆಂದರೆ ಪಂಚಾಯತ್ ರಾಜ್ಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಇಲಾಖೆಗಳ ಸ್ವಯಂ ಸೇವೆ ಸಂಸ್ಥೆಗಳ ಸ್ವಯಂ ಸೇವಕರು ಸಂಯೋಜನೆಯಲ್ಲಿ ಕಾರ್ಯ ಪಡೆ(ಕಾರ್ಯಪಡೆ) ರೂಪಿಸಿ ಇಡೀ ಪಂಚಾಯತ್‌ನ ವಿಕೋಪ ನಿರ್ವಹಣೆಯ ಜವಾಬ್ದಾರಿಯ ನೇತೃತ್ವವನ್ನು ಗ್ರಾಮ ಸರ್ಕಾರಕ್ಕೆ ನೀಡಿದ್ದು, ಚುನಾಯಿತ ಪ್ರತಿನಿಧಿಗಳಾದ ನಾವು ಪಂಚಾಯತ್ ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸಿ ಅನುಭವ ಪಡದು ಗ್ರಾಮ ಪಂಚಾಯತ್ ಅಭಿವೃದ್ಧಿಯಲ್ಲಿ ನಮ್ಮ ಪಾತ್ರ/ಜವಾಬ್ದಾರಿಗಳ ಮಹತ್ವವನ್ನು ಆಳವಾಗಿ ಅರ್ಥೈಸಿಕೊಂಡಿರುವುದರಿಂದ ವಿಕೋಪದ ಪರಿಸ್ಥಿತಿಯನ್ನು ಸಹ ನಿಭಾಹಿಸಲು ಸ್ಥಳೀಯ ಸರ್ಕಾರವಾಗಿ ನಮಗೆ ಸಾಧ್ಯವಾಯಿತು. ಈ ಸಂದರ್ಭದಲ್ಲಿ ಗ್ರಾಮೀಣ ಜನರು ಅಗತ್ಯತಗಳೇನು ಇಲ್ಲಿನ ಪರಿಸ್ಥಿತಿ ಹೇಗಿದೆ. ಆಗಬೇಕಾದ ಪ್ರಮುಖ ಕಾರ್ಯಗಳೇನು, ಮುಂದಿರುವ ಸವಾಲುಗಳೇನು ಎಂಬುವುದನ್ನು ಕೂಲಂಕುಶವಾಗಿ ಗಮನಿಸಿದ್ದೇವೆ.

ಒಂದು ರೀತಿಯಲ್ಲಿ ತುರ್ತು ಪರಿಸ್ಥಿತಿಯಂತೆ ಇರುವ ಈ ಸಮಯದಲ್ಲಿ ನಾವು ಸ್ಥಳೀಯ ಸರ್ಕಾರದ ಅವಿಭಾಜ್ಯ ಅಂಗವಾಗಿ ವಿಕೋಪವನ್ನು ಸಮರ್ಥವಾಗಿ ನಿಭಾಯಿಸುವಲ್ಲಿ, ಜನರ ಸಂಕಷ್ಟಗಳಿಗೆ ಸ್ಪಂದಿಸುವಲ್ಲಿ ಉತ್ತರದಾಯಿಯಾಗಿಕಾರ್ಯನಿರ್ವಹಿಸಿರುತ್ತೇವೆ. ಚುನಾಯಿತ ವರ್ಗ ಹಾಗೂ ಅಧಿಕಾರಿ ವರ್ಗ ಒಗ್ಗೂಡಿ ಆಡಳಿತ ನಡೆಸಿರುವುದೇ ಈ ಪರಿಸ್ಥಿತಿಯ ಸಮರ್ಪಕ ನಿರ್ವಹಣೆಗೆ ಪ್ರಮುಖ ಕಾರಣ. ಈ ವಿಕೋಪದ ಪರಿಸ್ಥಿತಿ ಮುಂದುವರಿಯುತ್ತಿರುವ ಈ ಸವಾಲಿನ ಸಮಯದಲ್ಲಿ ಪಂಚಾಯತ್ ಆಡಳಿತಕ್ಕೆ ಕೇವಲ ಆಡಳಿತಾಧಿಕಾರಿಯ ಅಥವಾ ಉಸ್ತುವಾರಿ ಸಮಿತಿಯ ನೇಮಕ ಅಸಮಂಜಸವಾದುದ್ದು, ತಮ್ಮ ಸರ್ಕಾರದ ಈ ಆಲೋಚನೆ ನಿರ್ಧಾರವನ್ನು ತಕ್ಷಣವೇ ಕೈ ಬಿಟ್ಟು ಪ್ರಸ್ತುತ ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡಿರುವ ಸ್ಥಳೀಯ ಸರ್ಕಾರವನ್ನೇ ಮಧ್ಯಾಂತರ ಸ್ಥಳೀಯ ಸ್ವಯಂ ಸರ್ಕಾರವಾಗಿ ಮುಂದುವರಿಸಬೇಕಾಗಿ ಈ ಮೂಲಕ ಕರ್ನಾಟಕ ರಾಜ್ ಸರ್ಕಾರವನ್ನು ಒತ್ತಾಯಿಸಿ ನಮ್ಮ ಪಂಚಾಯತ್‌ನ ಸಾಮಾನ್ಯ ಸಭೆಯ ನಿರ್ಣಯವನ್ನು ಮಂಡಿಸುತ್ತಿದ್ದೇವೆ.ಇದೇ ಪಂಚಾಯತ್‌ನ ಜನರಿಂದ ಚುನಾಯಿತರಾದ ನಾವು ಸ್ಥಳೀಯ ಸರ್ಕಾರದ ಭಾಗವಾಗಿ ನಮ್ಮ ಗ್ರಾಮದ ಜನರಿಗೆ ಗ್ರಾಮದ ಅಭಿವೃದ್ಧಿಗೆ ಬದ್ಧರಾಗಿದ್ದೇವೆ.

ಸಹಿ/-

ಅಧ್ಯಕ್ಷರು
ಬಲ್ಲ ಗ್ರಾಮ ಪಂಚಾಯಿತಿ
ಮುಳಬಾಗಿಲು ತಾಲ್ಲೂಕು

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

# ಬಲ್ಲ ಗ್ರಾಮ ಪಂಚಾಯ್ತಿ ಕಾರ್ಯಾಲಯ

ಬಲ್ಲ :-: ಮುಳಬಾಗಿಲು ತಾಲ್ಲೂಕು :-: ಕೋಲಾರ ಜಿಲ್ಲೆ.

ನಂ.

ದಿನಾಂಕ: 14/5/2022

| ಕ್ರ.ಸಂ | ಹೆಸರು | ಪದನಾಮ | ಸಹಿ |
|---|---|---|---|
| 1 | ಜಿ.ಎಂ. ಈಶ್ವರಪ್ಪ | ಅಧ್ಯಕ್ಷರು | [illegible] |
| 2 | ಸುಶೀಲಮ್ಮ | ಉಪಾಧ್ಯಕ್ಷರು | ಸುಶೀಲಮ್ಮ |
| 3 | ಜೆ.ಗಾಯಿತ್ರ | ಸದಸ್ಯರು | J. Gayathri |
| 4 | ಬಿ.ವಿ.ಸುಬ್ರಮಣಿ | ಸದಸ್ಯರು | B.V. ಸುಬ್ರಮಣಿ |
| 5 | ಬಿ.ಸೊಣ್ಣಪ್ಪ | ಸದಸ್ಯರು | ಸೊಣ್ಣಪ್ಪ |
| 6 | ರತ್ನಮ್ಮ | ಸದಸ್ಯರು | ರತ್ನಮ್ಮ |
| 7 | ವೆಂಕಟರಮಣಪ್ಪ | ಸದಸ್ಯರು | ವೆಂಕಟರಮಣಪ್ಪ |
| 8 | ಪಿ.ನಾಗರಾಜು | ಸದಸ್ಯರು | P. Nagaraju |
| 9 | ಗಂಗಮ್ಮ | ಸದಸ್ಯರು | ಗಂಗಮ್ಮ |
| 10 | ರತ್ನಮ್ಮ | ಸದಸ್ಯರು | K. Rathnamma |
| 11 | ಚನ್ನಮ್ಮ | ಸದಸ್ಯರು | ಚೆನ್ನಮ್ಮ |
| 12 | ನಾಗಮಣಿ | ಸದಸ್ಯರು | ನಾಗಮಣಿ |
| 13 | ಪದ್ಮಮ್ಮ | ಸದಸ್ಯರು | ಪದ್ಮಮ್ಮ |
| 14 | ವಿ.ಶಂಕರಪ್ಪ | ಸದಸ್ಯರು | V. ಶಂಕರಪ್ಪ |
| 15 | ಎಂ. ನಾರಾಯಣಪ್ಪ | ಸದಸ್ಯರು | M. ನಾರಾಯಣಪ್ಪ |
| 16 | ವಿ.ವೆಂಕಟರಮಣ | ಸದಸ್ಯರು | V. ವೆಂಕಟರಮಣ |
| 17 | ರತ್ನಮ್ಮ | ಸದಸ್ಯರು | ರತ್ನಮ್ಮ |

"ದೃಢೀಕರಿಸಿದೆ"

ಅಧ್ಯಕ್ಷರು
ಬಲ್ಲ ಗ್ರಾಮ ಪಂಚಾಯಿತಿ
ಮುಳಬಾಗಿಲು ತಾಲ್ಲೂಕು